ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 28 /*07/*2025

**ಪಾಟೀ ಸವಾಲುಃ 6ನೇ ಪ್ರತಿವಾದಿ ಪರ ಶ್ರೀ ಡಿ ಎಸ್ ಎಮ್ ವಕೀಲರಿಂದಃ**

ನಾವು ಒಟ್ಟು 5 ಜನ ಸಹೋದರರು. ನನ್ನ ತಂದೆ ಮತ್ತು ತಾಯಿ ಮರಣ ಹೊಂದಿರುತ್ತಾರೆ. ನಾನು ನನ್ನ ಹೆಂಡತಿ ಮತ್ತು ಎರಡು ಮಕ್ಕಳೊಂದಿಗೆ ಹೊಳೆನರಸೀಪುರದ ವಿದ್ಯುತ್ ನಗರದ ನಿವಾಸಿ. ನಾನು ಆರ್ ಸಿ ಸಿ ಮನೆಯಲ್ಲಿ ವಾಸವಾಗಿದ್ದೇನೆ. ನಾನು ಬಿ ಎಸ್ ಎನ್ ಎಲ್ ಕಛೇರಿಯಿಂದ ನಿವೃತ್ತ ನಾಗಿರುತ್ತೇನೆ. ನಾನು ವಾಸ ಇರುವ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ನಾನು ವಾಸವಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಕಾರಣ ಆ ಮನೆ ನನ್ನದ್ದಲ್ಲ. ಸದರಿ ಮನೆಯು ನನ್ನ ಹೆಂಡತಿಯ ಮನೆ. ನನ್ನ ಹೆಂಡತಿ ಬಿ ಎಸ್ ಲೋಲಾಕ್ಷಿ ಅಂಗನವಾಡಿ ಟೀಚರ್, ಟೈಲರಿಂಗ್ ಕೆಲಸ ಮಾಡುತ್ತಿದ್ದರು. ಸದರಿ ಅಂಗಡಿಗೆ ಹೆಸರಿರಲಿಲ್ಲ. ನನ್ನ ಹೆಂಡತಿ ಇಪ್ಪತ್ತು ವರ್ಷಗಳ ಹಿಂದೆ ಅಂಗನವಾಡಿ ಟೀಚರ್ ಆಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಸಂಬಳ ಎಷ್ಟಿತ್ತು ನನಗೆ ಗೊತ್ತಿಲ್ಲ. ನನ್ನ ಹೆಂಡತಿಯ ಕೆಲಸದ ಬಗ್ಗೆ ನನ್ನ ದಾವಾ ಪತ್ರಿಕೆಯಲ್ಲಿ ನಮೂದಿಸಿಲ್ಲ.

2. ಈ ದಾವೆಯನ್ನು ನಾನು ದಾವಾ ಆಸ್ತಿಯಲ್ಲಿ ಪಾಲಿಗಾಗಿ ದಾಖಲಿಸಿರುತ್ತೇನೆ. ಸದರಿ ಮನೆಯನ್ನು ದಾವಾ ಆಸ್ತಿಯಲ್ಲಿ ಸೇರಿಸದಿರಲು ಕಾರಣ ಅದು ನನ್ನ ಹೆಂಡತಿಯ ಮನೆಯಾಗಿರುತ್ತದೆ. 6ನೇ ಪ್ರತಿವಾದಿ ಸಲ್ಲಿಸಿರುವ ದಾವಾ ತಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆಯ ಪಕ್ಕದಲ್ಲಿ ಮನೆಯನ್ನು ಸೇರಿ ಒಟ್ಟು 5 ಗುಂಟೆ ಜಮೀನಿರುತ್ತದೆ. ನನ್ನ ದಾವೆಯಲ್ಲಿ ನನ್ನ ತಂದೆ ಜೀವಂತವಾಗಿರುವಾಗ ಆಸ್ತಿಗಳನ್ನು ಹಂಚಿರುವ ವಿಚಾರವನ್ನು ನಮೂದಿಸಿದ್ದೇನೆ. ಸರ್ವೆ ನಂಬರ್ 105/5 ರಲ್ಲಿ 3 ಗುಂಟೆ, ಸರ್ವೆ ನಂಬರ್ 49/4 ರಲ್ಲಿ 6 ½ ಗುಂಟೆ, ಸರ್ವೆ ನಂಬರ್ 64/1 ರಲ್ಲಿ 15 ½ ಗುಂಟೆ ಸರ್ವೆ ನಂಬರ್ 58 ರಲ್ಲಿ 20 ಗುಂಟೆ ಪ್ರಕಾರ ನನಗೆ ಬಂದಿರುತ್ತದೆ. ಸದರಿ ಆಸ್ತಿಗಳನ್ನು ನನ್ನ ತಂದೆಯವರು 5 ಮತ್ತು 9ನೇ ಪ್ರತಿವಾದಿಯವರಿಗೆ ಸಾಗುವಳಿ ಮಾಡಲು ಕೊಟ್ಟಿದ್ದು ಬಂದ ಬೆಳೆಯ ಆದಾಯದಲ್ಲಿ ನನಗೆ ಪಾಲನ್ನು ಪಡೆಯುವಂತೆ ಹೇಳಿದ್ದರು. ಸರ್ವೆ ನಂಬರ್ 105/5 ನನ್ನ ತಂದೆ ಸ್ವಯಾರ್ಜಿತವಾಗಿ ಕ್ರಯಕ್ಕೆ ಪಡೆದ ಆಸ್ತಿ. ಸದರಿ ಆಸ್ತಿಯಲ್ಲಿ ಮೈಸೂರು - ಹಾಸನ ರಸ್ತೆಯ ಬದಿಯನ್ನು 1 ½ ಗುಂಟೆ ಪ್ರಕಾರ 6 ಮತ್ತು 9 ನೇ ಪ್ರತಿವಾದಿಗೆ ಬಿಟ್ಟಿದ್ದು, ಸದರಿ ಆಸ್ತಿಯ ಹಿಂದಿನ ಭಾಗದಲ್ಲಿ 3 ಗುಂಟೆ ನನಗೆ ಬಿಟ್ಟಿದ್ದರು. ಸದರಿ ಆಸ್ತಿಯನ್ನು ನನ್ನ ತಂದೆ 6 ಮತ್ತು 9 ನೇ ಪ್ರತಿವಾದಿಗೆ ದಾನಪತ್ರ ಮುಖಾಂತರ ಬಿಟ್ಟಿದರು ಎಂದರೆ ಸರಿಯಲ್ಲ.

3. ಸದರಿ ಆಸ್ತಿಯಲ್ಲಿ 6 ಮತ್ತು 9 ನೇ ಪ್ರತಿವಾದಿಯು ತಲಾ 3 ಗುಂಟೆಗೆ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ತಲಾ 1 ½ ಗುಂಟೆಗೆ ಮನೆ ಕಟ್ಟಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಆಸ್ತಿಯ ಹಿಂಭಾಗದಲ್ಲಿ 6 ಮತ್ತು 9ನೇ

ಪ್ರತಿವಾದಿಗಳು ಕೃಷಿ ಚಟುವಟಿಕೆಯ ಪರಿಕರಗಳಿಗೆ ಮತ್ತು ದನಕರುಗಳಿಗೆ ಶೆಡ್ ನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮದ್ಯಂತರ ಅರ್ಜಿ 3 ರ ಮೇಲೆ ಮೇಲ್ಮನವಿ ಸಲ್ಲಿಸಿಲ್ಲ.

**6ನೇ ಪ್ರತಿವಾದಿ ವಕೀಲರ ಕೋರಿಕೆಯ ಮೇರಿಗೆ ಮುಂದುವರಿದ ಪಾಟೀ ಸವಾಲಿಗೆ ಸಮಯ ನೀಡಿ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

**ಹೊಳೆನರಸೀಪುರ**